**ಸಾಕ್ಷಿಯನ್ನು ದಿಃ 30.04.2026 ರಂದು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ**

ನಾನು 25 ವರ್ಷದಿಂದ ವೈಧ್ಯಕೀಯ ಸೇವೆ ಸಲ್ಲಿಸುತ್ತಿದ್ದೇನೆ. ನಮ್ಮ ಆಸ್ಪತ್ರೆಗೆ ಬರುವ ಮೊದಲು ಅರ್ಜಿದಾರರು ಬೇರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ಬಂದ ಬಗ್ಗೆ ದಾಖಲೆಗಳಲ್ಲಿ ನಮೂದಿಲ್ಲ ಹಾಗೂ ನನಗೆ ಮಾಹಿತಿ ಇಲ್ಲ. ಮೆದುಳಿನಲ್ಲಿ ರಕ್ತಸ್ರಾವ ಎಂದು ಇದ್ದರೆ ಅದು ತೀವ್ರ ಸ್ವರೂಪದ ಗಾಯ ಆಗಿದೆ. ಗಾಯದ ಸ್ವರೂಪ ದೇಹದ ಯಾವ ಭಾಗದಲ್ಲಿ ಆಗಿದೆ ಎಂಬುದರ ಮೇಲೆ ಅವಲಂಬಿತ ಆಗಿದೆ. ಮೆದುಳಿನಲ್ಲಿ ರಕ್ತಸ್ರಾವಕ್ಕೆ ಶಸ್ತ್ರ ಚಿಕಿತ್ಸೆಯ ಅಗತ್ಯ ಇಲ್ಲ ಎಂದರೆ ಸರಿಯಲ್ಲ. ರಕ್ತಸ್ರಾವದ ತೀವ್ರತೆ ಮತ್ತು ಮೆದುಳಿನ ಊತದ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ. ಅರ್ಜಿದಾರರಿಗೆ ನಾವು ಶಸ್ತ್ರ ಚಿಕಿತ್ಸೆ ಮಾಡಿಲ್ಲ. ಔಪಚಾರಿಕ ಚಿಕಿತ್ಸೆ ನೀಡಿದ್ದೇವೆ. ಔಷಧಿ ನೀಡಿ ಅರ್ಜಿದಾರರಿಗೆ ಶುಶ್ರುಸೆ ನೀಡಿರುತ್ತೇನೆ. ಅರ್ಜಿದಾರರಿಗೆ ಸಂಬಂಧಿಸಿದ ಗಾಯದ ಪ್ರಮಾಣ ಪತ್ರವನ್ನು ನಾನು ನೋಡಿರುವುದಿಲ್ಲ. ಎದುರುದಾರರ ವಿಳಾಸವನ್ನು ನನ್ನ ಪ್ರಮಾಣ ಪತ್ರದಲ್ಲಿ ನನಗೆ ಬಂದಿರುವ ಸಮನ್ಸ್ ಅನ್ನು ನೋಡಿ ನಮೂದಿಸಿದ್ದೇನೆ. ಮೆದುಳಿನ ಊತ ಆದ ಸಂದರ್ಬದಲ್ಲಿ ವಯಸ್ಸಿಗೆ ಅನುಗುಣವಾಗಿ ಹಾಗೂ ಗಾಯಾದ ತೀವ್ರತೆಗೆ ಅನುಗುಣವಾಗಿ ಊತ ನಿಗದಿತ ಅವದಿಯಲ್ಲಿ ಕಡಿಮೆ ಆಗುತ್ತದೆ. ಸಾಮಾನ್ಯವಾಗಿ 3-6 ಬೇಕಾಗುತ್ತದೆ.

2. ಗಾಯಾಳು ದಾಖಲಾದಾಗ ಕ್ಯಾಶುಯಾಲಿಟಿ ಮೆಡಿಕಲ್ ಆಫೀಸರ್ ಗಾಯಾಳುವಿನ ಬಗ್ಗೆ ಕೇಸ್ ಶೀಟ್ ನಲ್ಲಿ ನಮೂದಿಸುತ್ತಾರೆ. ಮೊದಲ ದಿನ ಗಾಯಾಳು ಪ್ರಜ್ಞಾಹೀನಾ ಸ್ಥಿತಿಯಲ್ಲಿದ್ದ. ಖಂಡಿಕೆ 4 ರಲ್ಲಿ ಹೇಳಿರುವ ವಿಚಾರಗಳು ಸತ್ಯವಾಗಿದೆ. ಆ ಸಮಯದಲ್ಲಿ ಸಾಮಾನ್ಯ ಪ್ರಶ್ನೆಗಳಿಗೆ ಗಾಯಾಳು ಸ್ಪಂದಿಸುತ್ತಿದ್ದ. ಸಿ.ಟಿ. ಸ್ಕ್ಯಾನ್ ಪ್ರಕಾರ ಗಾಯಾಳುವಿನ ಸ್ಥಿತಿ ಸಾಮಾನ್ಯವಾಗಿದೆ ಎಂದರೆ ಸರಿಯಲ್ಲ. ಊತ ಹಾಗೂ ರಕ್ತಸ್ರಾವ ಇದೆ ಎನ್ನುತ್ತಾರೆ. ಮೆಡಿಕಲ್ ಚಿಕಿತ್ಸೆಗೆ ಕಡಿಮೆ ಆಗಿರುವ ಕಾರಣ ಶಸ್ತ್ರ ಚಿಕಿತ್ಸೆ ಮಾಡಿಲ್ಲ ಎನ್ನುತ್ತಾರೆ. ಖಂಡಿಕೆ 6 ರಲ್ಲಿ ಹೇಳಿರುವಂತೆ ಗಾಯಾಳುವಿನ ಸ್ಥಿತಿ

ಸುಧಾರಣೆ ಆಗಿತ್ತು. ನಾವು ಕೇಳುವ ಸಾಮಾನ್ಯ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು. ಗಾಯಾಳು ಬಿಡುಗಡೆಯಾಗುವ ಸಂದರ್ಭದಲ್ಲೂ ಮಾತನಾಡುವ ಸ್ಥಿತಿಯಲ್ಲಿದ್ದರು.

3. ಗಾಯಾಳು ಮೆಕಾನಿಕ್ ಕೆಲಸ ಮಾಡುತ್ತಿದ್ದರು ಎಂದು ಹೇಳಿದ್ದಾರೆ. ಕೇಸ್ ಶೀಟ್ ನಲ್ಲಿ ಈ ಬಗ್ಗೆ ನಮೂದಿಸಿಲ್ಲ. ಅರ್ಜಿಯಲ್ಲಿ ಕೂಲಿ ಕೆಲಸ ಮಾಡುತ್ತಿರುವುದಾಗಿ ಹೇಳಿರುತ್ತಾರೆ ಎಂದರೆ ನನಗೆ ಮಾಹಿತಿ ಇಲ್ಲ. ಯಾವ ಸ್ಥಳದಲ್ಲಿ ಮೆಕಾನಿಕ್ ಕೆಲಸ ಮಾಡುತ್ತಿದ್ದ ಬಗ್ಗೆ ಮಾಹಿತಿ ಪಡೆದಿಲ್ಲ. ಸಿ.ಟಿ ಸ್ಕ್ಯಾನ್ ನಂತರ ಎಂ.ಆರ್.ಐ ಅನ್ನು ಇಂತಿಷ್ಟೇ ದಿನದಲ್ಲಿ ಮಾಡಬೇಕು ಎಂಬ ನಿಯಮ ಇಲ್ಲ. ಸಿ.ಟಿ. ಸ್ಕ್ಯಾನ್ ವಿವರದಿಂದ ಸಂಪೂರ್ಣ ಮಾಹಿತಿ ಸಿಗದೇ ಇದ್ದಾಗ ಎಂ.ಆರ್.ಐ ಮಾಡಿಸುವುದಿಲ್ಲ. ಸಿ.ಟಿ. ಸ್ಕ್ಯಾನ್ ಮಾಡಿದ ಒಂದು ವರ್ಷದ ನಂತರ ಎಂ.ಆರ್.ಐ ಮಾಡುವ ಅವಶ್ಯಕತೆ ಏನಿತ್ತು ಎಂದರೆ ಅರ್ಜಿದಾರರ ಚಟುವಟಿಕೆಗಳಲ್ಲಿ ವೆತ್ಯಾಸ ಕಂಡು ಬಂದ ಕಾರಣ ಮಾಡಿದ್ದೇವೆ. ಚಿಕಿತ್ಸೆಯ ನಂತರ ಅರ್ಜಿದಾರರು ಸಂಪೂರ್ಣ ಗುಣಮುಖರಾಗಿದ್ದಾರೆ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ತೊಂದರೆಗಳು ಇದೆ ಎನ್ನುತ್ತಾರೆ. ಗಾಯಾಳುವಿನ ಆಲೋಚನೆಗಳು ಸರಿಯಾಗಿದೆ ಎಂದು ಬರೆದಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರು ತನ್ನ ದೈನಂದಿನ ಕೆಲಸಗಳನ್ನು ಮಾಡಿಕೊಳ್ಳಲು ತೊಂದರೆ ಇಲ್ಲ. ಸಾಕ್ಷಿ ಮುಂದುವರೆದು ಮೊದಲಿನಂತೆ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ತೊಂದರೆ ಇದೆ ಎನ್ನುತ್ತಾರೆ. ಸ್ನೇಹಿತರೊಂದಿಗೆ ಸಂಭಾಷಣೆ ಮಾಡಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಹೆಚ್ಚಿನ ಪರಿಹಾರ ಸಿಗಲಿ ಎಂದು ಉತ್ತ್ರಕ್ಷೆಣೆಯ ನ್ಯೂನತೆ ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.